ನನ್ನ ಸೈಕಲ್ ಹತ್ತಿದೆ. ಹಾಸ್ಟೆಲ್‌ಗೆ ಬಂದೆವು. ಚಂಪಾ ಕಾಯುತ್ತಿದ್ದ. 'ಹೆಲೋ ಪಾಟೀಲ್, ಧಿಸ್ ಈಜ಼್ ಕುಮಾರ್, ಮೈ ಫ್ರೆಂಡ್' ಎನ್ನುತ್ತ ಹಾಸ್ಟೆಲ್ ಪ್ರವೇಶಿಸಿದ. ನಾಡಿಗ ನಮಗೆ ಹೊರಗಿನವನು, ಹೊಸಬ ಅನಿಸಲೇ ಇಲ್ಲ.

***

ಆಗಸ್ಟ್ 15ರಂದು ಶನಿವಾರ ಬೆಳಗ್ಗೆ 10 ಗಂಟೆಗೆ 'ಸಂಕ್ರಮಣ'ದ ಬಿಡುಗಡೆ. ನಾನು 9 ಗಂಟೆಗೇ ಹೋಗಿ ಸಿದ್ಧತೆ ನಡೆಸಿದ್ದೆ. ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ ಮಿತ್ರರು ನಾಡಿಗನ ಜೊತೆ ಬಂದರು. ಒಬ್ಬೊಬ್ಬರಾಗಿ, ಪಾ.ವೆಂ. ಆಚಾರ್ಯ, ಮಾಧವ ಮಹಿಷಿ, ರಾಮಚಂದ್ರ ಕೊಟ್ಟಲಗಿ, ಡಾ. ಕೆ. ಕೃಷ್ಣಮೂರ್ತಿ, ಸದಾಶಿವ ಒಡೆಯರ, ಇಟಗಿ ರಾಘವೇಂದ್ರ, ಕಣವಿ, ಹಕಾರಿ ಮುಂತಾದವರು, ಪತ್ರಿಕಾ ವರದಿಗಾರರು ಬಂದರು. ಈಗಾಗಲೇ ಮುದ್ರಣಗೊಂಡಿದ್ದ 'ಸಂಕ್ರಮಣ'ದ ಮೊದಲ ಸಂಚಿಕೆಯನ್ನು ನಾಡಿಗ ಓದಿಕೊಂಡಿದ್ದ. ಅಂದು ಮೊದಲ ಸಂಚಿಕೆಯನ್ನು ಬಿಡುಗಡಿಸಿದ. ನಮ್ಮ ಪತ್ರಿಕೆಯ ಹೊಸತನ, ವಿಶಾಲ ದೃಷ್ಟಿ, ಮುಕ್ತ ಮನಸ್ಸು, ಲೇಖನಗಳ ವೈವಿಧ್ಯ ಕುರಿತು ಹೇಳಿದ. ಜೊತೆಗೆ ಸಮಗ್ರ ಕನ್ನಡ ಸಾಹಿತ್ಯಕ್ಕೆ ಇಂದು ಬೇಕಾಗಿದ್ದ ನವ ಸ್ಪರ್ಶದ ಕುರಿತು ಹೇಳಿ, ನಾವು ಮೂವರು ಗೆಳೆಯರು ಕೂಡಿ ನವ ಮನ್ವಂತರವನ್ನು ತೆರೆದಿದ್ದೇವೆ, ಅದು ಇಂಥ ಪತ್ರಿಕೆಗಳಿಂದ ಮಾತ್ರ ನೀಗುವಂಥದು ಎಂದ. ಪತ್ರಕರ್ತರ ವಿವಿಧ ಪ್ರಶ್ನೆಗಳಿಗೂ ನಿರರ್ಗಳವಾಗಿ ಉತ್ತರಿಸಿದ.

***

ಶನಿವಾರ ಬಿಡುಗಡೆಯ ಕಾರ್ಯಕ್ರಮ ಮುಗಿದ ಬಳಿಕ ಚಂಪಾನ ಹಾಸ್ಟೆಲ್‌ದಲ್ಲಿ ಊಟ ಮಾಡಿದೆವು. ಅಂದು ಸಂಜೆ ಎಲ್ಲರೂ ಕೂಡಿ ನಮ್ಮ ಮನೆಯಲ್ಲಿ ಚರ್ಚೆ, ಊಟ. ನಾಡಿಗನಿಗೆ ನಮ್ಮ ಮನೆ, ಅವ್ವನ ಜೊತೆಯ ಗ್ರಾಮೀಣ ಹರಟೆ ಬಹಳ ಸೇರಿತು. ಅಂದು ನಮ್ಮ ಮನೆಯಲ್ಲಿಯೇ ಉಳಿದ. ರವಿವಾರದ ಪತ್ರಿಕೆಗಳಲ್ಲಿ ನಮ್ಮ 'ಸಂಕ್ರಮಣ' ಮತ್ತು ನಾಡಿಗನ ಭಾಷಣದ ವರದಿ ತುಂಬಿದ್ದುವು. ಅಂದು ಸಂಜೆವರೆಗೆ ನನ್ನ ಮನೆಯಲ್ಲಿಯೇ ಇದ್ದ. ನನ್ನ ಕವಿತೆಗಳನ್ನು ಓದಿಸಿಕೊಂಡ, ತನ್ನ ಕವಿತೆಗಳನ್ನೂ ವಾಚಿಸಿದ. ಕಾವ್ಯವಾಚನದ ಅವನ ನಾಟಕೀಯ ವೈಖರಿ ಮೆಚ್ಚುವಂತಿತ್ತು. ಅಂದು ಅವ್ವ ಮಾಡಿದ ರೊಟ್ಟಿ, ಪುಂಡಿಪಲ್ಲೆ, ಚಟ್ನಿ ತಿಂದು ಸಂತೃಪ್ತನಾದ. ಗೋವಾ ಪ್ರವಾಸ ಮಾಡಲು ನಮಗೆ ಆಮಂತ್ರಣ ನೀಡಿದ.

***

ನಾನು, ಗಿರಡ್ಡಿ ಮಡಗಾಂವಗೆ ಹೋದೆವು (1964 ಸೆಪ್ಟಂಬರ್ 11). ಇಡೀ ವಾತಾವರಣ ನಮಗೆ ವಿದೇಶದ ಅನುಭವ ನೀಡುತ್ತಿತ್ತು. ವಿಶಾಲ ಮನೆಗಳು, ಅಂಗಡಿಗಳು, ಎತ್ತರದ ಕಟ್ಟಡಗಳು; ಜನರ, ಮಹಿಳೆಯರ ಮುಕ್ತ ಓಡಾಟ, ಮಾತು, ಎಲ್ಲವೂ ನಮಗೆ ಹೊಸ ಲೋಕ. ಮಡಗಾಂವ ಚೌಗಲೆ ಕಾಲೇಜಿನಲ್ಲಿ ಇಂಗ್ಲಿಷ್ ಕಲಿಸುತ್ತಿದ್ದ ನಾಡಿಗ ಅಲ್ಲಿಯವರಿಗೆ ಸಾಕಷ್ಟು ಪರಿಚಿತನೇ ಆಗಿದ್ದ. ನಮಗೆ ನಾಡಿಗನ ಮನೆ ವಿಳಾಸ ಗೊತ್ತಿತ್ತು. ಬಸ್ ಇಳಿದು ವಿಚಾರಿಸುತ್ತ ನಡೆದುಕೊಂಡೇ, ಊರು-ಜನ ನೋಡುತ್ತ ಹೊರಟೆವು. ಬಹುಪಾಲು ಮನೆಗಳಿಗೆ ತೆರೆದ ಕಿಟಕಿಗಳು; ಬೇಲಿ, ಕಟಾಂಜನ ಇತ್ಯಾದಿ ಇರಲಿಲ್ಲ. ನಮ್ಮ ಕಡೆಯ ಭಯ, ಬಂಧನ ಅಲ್ಲಿ ಕಾಣಿಸಲಿಲ್ಲ. ಒಂದು ದೊಡ್ಡ ವಠಾರದ ಹಾಗಿದ್ದ ಜಾಗದಲ್ಲಿ ಸಾಲಾಗಿ, ನಾಲ್ಕು ವಿಶಾಲ ಮನೆಗಳು; ಅದರಲ್ಲಿ ಬಲಗಡೆಯ ಮೊದಲಿನ ಮನೆ ನಾಡಿಗನದು. ಮುಂಬದಿಯಲ್ಲಿ ಒಂದು ಆಟದ ಬಯಲಿನಷ್ಟು ವಿಶಾಲ ಖಾಲಿ ಜಾಗ. ಸುತ್ತಲೂ ತೆಂಗಿನ ಮರಗಳು. ನಾವು ಎಷ್ಟು ಹೊತ್ತಿಗೆ ಬರುತ್ತೇವೆ ಎಂದು ಖಚಿತ ಸಮಯ ತಿಳಿಸಿರಲಿಲ್ಲ. ನಾಡಿಗ ಮನೆಯಲ್ಲಿ ಇರಲಿಲ್ಲ, ಪತ್ನಿ-ಮಗಳ ಜೊತೆ ಕೋಲ್ವಾ ಬೀಚ್‌ಗೆ ಹೋಗಿದ್ದನಂತೆ. ಮನೆಯಲ್ಲಿದ್ದ ಕುಮಾರ ಮತ್ತು ಪತ್ನಿಯ ಅಣ್ಣ ನಾಗರಾಜರಾವ್ ಹಾಗೂ ದೊಡ್ಡ ಅಣ್ಣ ಕೃಷ್ಣಮೂರ್ತಿ ಅವರಿಗೆ ನಾವು ಬರುವ ವಿಚಾರ ತಿಳಿದಿತ್ತು. (ಇವರಿಬ್ಬರಿಗಿಂತ ಹಿರಿಯ ಅಣ್ಣ ಪಿ. ಶ್ರೀನಿವಾಸರಾವ್.) ನಮ್ಮ ಚೀಲಗಳನ್ನು ಇಟ್ಟು, ಕೈಕಾಲು ತೊಳೆಯುವಷ್ಟರಲ್ಲಿ ನಾಗರಾಜ ಚಹಾ, ಬಿಸ್ಕಿಟ್ ಕೊಟ್ಟ. ನಮಗೆ ಈಗಾಗಲೇ ಪರಿಚಿತರಾಗಿದ್ದ ಕುಮಾರ ನಾಡಿಗ ಬರುವುದರೊಳಗೆ ಸ್ವಲ್ಪ ವಾಕ್ ಹೋಗಿ ಬರೋಣ ಎಂದು ನಮ್ಮನ್ನು ಕರೆದುಕೊಂಡು ಹೊರಟರು. ರಾತ್ರಿ 8.30ರವರೆಗೆ ಸುತ್ತಾಡಿ ಬಂದೆವು. ಅಷ್ಟರಲ್ಲಿ ನಾಡಿಗ ಮನೆಗೆ ಬಂದಿದ್ದ. ಪತ್ನಿ ಮಾಲತಿ, ಪುಟ್ಟ ಮಗಳು ಸ್ವಪ್ನ. ನಾಗರಾಜ ಮಾಲತಿಯ ಅಣ್ಣ. ಅವನು ನಮಗೆಲ್ಲರಿಗೂ ಚಪಾತಿ, ಆಲೂಗಡ್ಡೆ ಪಲ್ಲೆ, ಅನ್ನ, ಸಾರು ಮಾಡಿಟ್ಟಿದ್ದ.